# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿದ್ದಾಪುರ .

## ಸಿ .ಸಿ. ನಂ. 202/2026

| **ಪಿರ್ಯಾದಿಃ** | | **ಆರೋಪಿಃ** |
|---|---|---|
| ರಾಜ್ಯದ ಪರ<br>ಸಿದ್ದಾಪುರ ಪೋಲೀಸ್ ಠಾಣೆ. | **ವಿರುದ್ಧ** | ಪ್ರಶಾಂತ ತಂದೆ ಗ್ರೆಗೋರಿ ಫರ್ನಾಂಡೀಸ್<br>ವಯಸ್ಸು 48 ವರ್ಷ, ವೆಲ್ಡಿಂಗ್ ಕೆಲಸ,<br>ವಾಸಃ ಟಿ.ಎಸ್.ಎಸ್. ರಸ್ತೆ, ಶಿರಸಿ, |

## ಆಪಾದನೆ

**ಶ್ರೀ ಹರೀಶಕುಮಾರ ಎಮ್., ಬಿ.ಕಾಂ. ಎಲ್.ಎಲ್.ಬಿ..,** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ದಾಪುರ ಆದ ನಾನು, ಆರೋಪಿತನಾದ ನಿನ್ನನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.

ಮಾನ್ಯ ನ್ಯಾಯಾಲಯ ಮತ್ತು ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಸಿದ್ದಾಪುರ ಶಹರದ ಸಿದ್ದಾಪುರ –ಶಿರಸಿ ರಸ್ತೆ, ರವೀಂದ್ರ ನಗರ ಹತ್ತಿರ ಆರೋಪಿತನಾದ ನೀನು ನಿನ್ನ ಕಾರಿನಲ್ಲಿ ಒಬ್ಬ ಹೆಚ್ಚುವರಿ ಪ್ರಯಾಣಿಕನನ್ನು ಕುರಿಸಿಕೊಂಡು ದಿನಾಂಕ 18.02.2026 ರಂದು 14.30 ಗಂಟೆಗೆ ನಿನ್ನ ಟಾಟಾ ನ್ಯಾನೋ ಕಾರ ನಂ.ಕೆ ಎ –28/ಎನ್ –2759 ನೇದನ್ನು ಶಿರಸಿ ಕಡೆಯಿಂದ ಸಿದ್ದಾಪುರ ಕಡೆಗೆ ಅತೀ ವೇಗ ಮತ್ತು ಮಾನವೀಯ ಪ್ರಾಣಕ್ಕೆ ಅಪಾಯಕಾರಿಯಾದ ರೀತಿ ಚಲಾಯಿಸಿಕೊಂಡು ಬಂದವನು ಸಿದ್ದಾಪುರ ಪಟ್ಟಣದ ರವೀಂದ್ರ ನಗರಕ್ಕೆ ಸೇರಿದ ಹಿರೋ ಶೋರೂಮ ಬಳಿ ಕಾರಿನ ವೇಗದಲ್ಲಿ ನಿಯಂತ್ರಣ ಕಳೆದುಕೊಂಡು ತೀರ ನಿನ್ನ ಬಲಕ್ಕೆ ಕಾರನ್ನು ಚಲಾಯಿಸಿಕೊಂಡು ಬಂದು ಡಾಂಬರ ರಸ್ತೆಯ ಪಕ್ಕದಲ್ಲಿರುವ ಕಚ್ಚಾ ರಸ್ತೆಯ ಮೇಲೆ ನಿಲ್ಲಿಸಿಟ್ಟ ಪಿರ್ಯಾದಿಯಾದ ಮಹಾಬಲೇಶ್ವರ ತಂದೆ ರಾಮಾ ನಾಯ್ಕ ಅವರ ಮಾರುತಿ ಸುಜುಕಿ ಬ್ರಿಜಾ ಕಾರ ನಂಬರ ಕೆ ಎ –31/ಪಿ–0788 ನೇದಕ್ಕೆ ಮುಂದಿನ ಬಲಭಾಗಕ್ಕೆ ಡಿಕ್ಕಿ ಹೊಡೆದು ಅಪಘಾತ ಪಡಿಸಿ ನಿನ್ನ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಅಂಥೋನಿ ಡಯಾಗೋ ಬೆರಿಟೋ ಅವರ ತಲೆಗೆ, ಮುಖಕ್ಕೆ, ಕಿವಿಗೆ, ಕಣ್ಣಿನ ಹುಬ್ಬಿನ ಬಳಿ ರಕ್ತಗಾಯ ಪಡಿಸಿ ಗಂಭೀರ ಸ್ವರೂಪದ ಗಾಯ ನೋವು ಪಡಿಸಿ, ಫಾತಿಮಾ ಅಂಥೋನಿ ಬೆರಟೋ ರವರಿಗೆ ಬಲಗಾಲಿನ ಪಾದದ ಗಂಟಿನ ಮೇಲೆ ರಕ್ತ

ಗಾಯ ಪಡಿಸಿ ಸದಾ ಸ್ವರೂಪದ ಗಾಯ ನೋವು ಪಡಿಸಿ ನಂತರ ಅಂಥೋನಿ ಅಗಸ್ತಿನ್ ಫರ್ನಾಂಡಿಸ್ ರವರಿಗೆ ಹಣೆಗೆ ರಕ್ತ ಗಾಯ ಪಡಿಸಿ ಸದಾ ಸ್ವರೂಪದ ಗಾಯ ನೋವು ಪಡಿಸಿ ಹಾಗೂ ಅಂಜಲಿ ಎಡವರ್ಡ ಫರ್ನಾಂಡಿಸ್ ಇವಳ ತಲೆಗೆ ರಕ್ತ ಗಾಯ ಪಡಿಸಿ ಸಾದಾ ಸ್ವರೂಪದ ಗಾಯ ನೋವು ಪಡಿಸಿದಲ್ಲದೇ, ಆರೋಪಿತನಾದ ನೀನು ಸಹ ಎಡಗೈ, ಅಂಗೈಗೆ ಒಳನೋವು ಪಡಿಸಿಕೊಂಡು ಸಾದಾ ಸ್ವರೂಪದ ಗಾಯ ನೋವು ಪಡಿಸಿಕೊಂಡು ಎರಡು ಕಾರನ್ನು ಜಖಂಗೊಳಿಸಿ ಆ ಮೂಲಕ ಕಲಂ 281, 125(ಎ), 125(ಬಿ) ಭಾರತೀಯ ನ್ಯಾಯ ಸಂಹಿತೆ-2023 ಮತ್ತು ಕಲಂ 194(ಎ) ರ ಮೋಟಾರು ವಾಹನಗಳ ಅಧಿನಿಯಮ-1988 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಆರೋಪಿಸಲಾಗಿದೆ.

1. ಪ್ರಶ್ನೆಃ ಈ ಮೇಲೆ ಓದಿ ಹೇಳಲಾದ ಆಪಾದನೆಯು ನಿಮಗೆ ತಿಳಿಯಿತೇ?
ಉತ್ತರಃ

2. ಪ್ರಶ್ನೆಃ ಆಪಾದನೆ ಯನ್ನು ಒಪ್ಪಿಕೊಳ್ಳುವಿರೋ ವಿಚಾರಣೆ ಬಯಸುವಿರೋ?
ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ ಅವರು ಕೊಟ್ಟ ಉತ್ತರವನ್ನು ಅದೇ ರೀತಿ ದಾಖಲಿಸಿಕೊಳ್ಳಲಾಯಿತು ).

**ದಿನಾಂಕಃ** *29.06.2026* **ಪ್ರ.ದ.ನ್ಯಾ. ದಂಡಾಧಿಕಾರಿ, ಸಿದ್ದಾಪುರ .**